ಡಾ.ಭೀಮಣ್ಣ ಘನಾಥೆ
ಸರಕಾರಿ ಮಹಿಳಾ ಪ್ರತಮ ದರ್ಜೆ ಕಾಲೇಜ
ಕಲಬುರಗಿ

# ಕಾಯ್ದೆ ಭಂಗ ಚಳುವಳಿ ಮತ್ತು ಉಪ್ಪಿನ ಸತ್ಯಾಗ್ರಹ

೧೯೩೦ ಫೆಬ್ರುವರಿ ೧೪

1. ಪೀಠಿಕೆ
2. ಕಾರಣಗಳು
3. ಬೇಡಿಕೆಗಳು
4. ಘಟನೆಗಳು
5. ಪರಿಣಾಮಗಳು
6. ಚಳುವಳಿಯ ನಿಲುಗಡೆ
7. ಉಪಸಂವಾರ

ಪೀಠಿಕೆ ;-

ಅಸಹಕಾರ ಚಳುವಳಿಯ ನಂತರ ನಡೆದ ಎರಡನೇಯ ದೊಡ್ಡ ಚಳುವಳಿ. ಇದು ಗಾಂಧೀಜಿಯ ನಾಯಕತ್ವ ಮತ್ತು ಮಾರ್ಗದರ್ಶನದಂತೆ ಸತ್ಯ, ಅಹಿಂಸೆ, ಶಾಂತಿಯುತ ಹೋರಾಟವಾಗಿದೆ. ಬ್ರಿಟಿಷ ಪೋಲಿಸರ ದೌರ್ಜನ್ಯವನ್ನು ಸಹಿಸುವ, ಭಾರತೀಯರ ತಾಳ್ಮೆ ಸಹನೆಯನ್ನು ಪರಿಕ್ಷೀಸುವ ಚಳುವಳಿಯಾಗಿತ್ತು.

**ಕಾರಣಗಳು**

೧.) ಸ್ವರಾಜ್ಯ ಪಕ್ಷದ ಸರಕಾರದ ಕೇಂದ್ರ ಬಜೇಟನ್ನು (೧೯೨೫-೨೬) ಬ್ರಿಟಿಷ ವೈಸರಾಯ ತೀರಸ್ಕರಿಸಿದ್ದು.

೨.) ಬ್ರಿಟಿಷ ಅಧಿಕಾರಿಗಳಿಗೆ ಅತಿ ಹೆಚ್ಚು ಸಂಬಳ ಇತ್ತು. ಬ್ರಿಟನ್ ಪ್ರಧಾನಿಗಿಂತ ಎರಡುಪಟ್ಟು ಭಾರತದ ವೈಸರಾಯ್‌ಯ ಸಂಬಳ, ಮತ್ತು ಹೆಚ್ಚಿನ ಭತ್ಯೆಗಳು ಬೇರೆ ಇತರ ಬ್ರಿಟಿಷ ಅಧಕಾರಿಗಳ ಹೆಚ್ಚಿನ ಸಂಬಳ, ಭತ್ಯ, ಇತರ ಸವಲತ್ತುಗಳಿಂದ ಬಾರತದ ವರಮಾನ ಸೊರಿ ಹೋಗುತ್ತಿದ್ದದನ್ನು ಬಜೇಟ್‌ನಲ್ಲಿ ತೋರಿಸಿಕೊಟ್ಟಿದ್ದರು.

೩.) ಸೈಮನ್ ಆಯೋಗದಲ್ಲಿ ಭಾರತಿಯ ಪ್ರತಿನಿಧಿಗಳಿಗೆ ಸ್ಥಾನ-ಮಾನ ಇರಲಿಲ್ಲ (೧೯೨೭ ರಲ್ಲಿ ೧೯೧೯ರ ಕಾಯ್ದೆಯಂತೆ ಸ್ಥಳಿಯ ಆಡಳಿತದ ಸ್ವಾಯತ್ತತೆಯನ್ನು ಪರಿಕ್ಷೀಸಲು ಸೈಮನ್ ನೇತೃತ್ವದಲ್ಲಿ ರಚನೆಯಾದ ಆಯೋಗ)

೪.) ಭಾರತದ ಕಾರ್ಯದರ್ಶಿ ಬಿಟಿಕನ್ ಹೆಡ್ಡ ನು ಭಾರತೀಯರಿಗೆ ಆಳುವುದು ಗೊತ್ತಿಲ್ಲ ಎಂದು ಹೀಯಾಳಿಸಿದ್ದನು.

೫.) ಭಾರತದ ಕಂದಾಯದ ಮೇಲೆ ಅಧಿಕ ತೆರಿಗೆ ವಿಧಿಸಿದ್ದನ್ನು ವಿರೋಧಿಸಲು

೬.) ವಿದೇಶಿವಸ್ತುಗಳ ಆಮುದು ತೆರಿಗೆಯನ್ನು ರದ್ದು ಪಡಿಸಿದ್ದರಿಂದ ಭಾರತೀಯರ ಖಾದಿ ಉದ್ದೀಮೆ ಭಾರಿ ಕುಸಿಯುವ ಭಯ

೭.) ಭಾರತೀಯ ಸೈನ್ಯವನ್ನು ವಿದೇಶಿ ಯುದ್ಧಗಳಲ್ಲಿ ತೋಡಗಿಸಿದ್ದನ್ನು ವಿರೋಧಿಸಲು.

೮.) ಉಪ್ಪಿನ ಮೇಲೆ ಅಧಿಕ ತೆರಿಗೆಯನ್ನು ವಿಧಿಸಿದ್ದನ್ನು ವಿರೋಧಿಸಲು.

**ಬೇಡಿಕೆಗಳು**

೧.) ಪೂರ್ಣ ಮದ್ಯಪಾನ ನಿಶೇದಿಸಬೇಕು.

೨.) ಭಾರತದ ರೂಪಾಯಿಯ ಪರಿವರ್ತನೆಯ ಬೆಲೆಯನ್ನು ಸ್ಥಿರಪಡಿಸಬೇಕು.

೩.) ಭೂ ಕಂದಾಯವನ್ನು ೫೦% ಇಳಿಸಬೇಕು.

೪.) ಉಪ್ಪಿನ ಮೇಲೆ ಇರುವ ತೆರಿಗೆಯನ್ನು ಸಂಪೂರ್ಣವಾಗಿ ತಗೆದು ಹಾಕಬೇಕು.

೫.) ೫೦% ರಷ್ಟು ಮಿಲಿಟರಿ ವೆಚ್ಚವನ್ನು ತಗ್ಗಿಸಬೇಕು.

೬.) ಬ್ರಿಟಿಷ ಅಧಿಕಾರಿಗಳ ಸಂಬಳವನ್ನು ೫೦% ರಷ್ಟು ಇಳಿಸಬೇಕು.

೭.) ವಿದೇಶಿ ವಸ್ತು –ವಸ್ತ್ರಗಳ ಮೇಲೆ ಆಮುದು ತೆರಿಗೆ ವಿಧಿಸಬೇಕು.

೮.) ಹೆಚ್ಚುವರಿ ಶಿಕ್ಷೆಗಳನ್ನು ರದ್ದು ಪಡಿಸಬೇಕು.

೯.) ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಬೇಕು.

೧೦) ಭಾರತೀಯರು ಆತ್ಮರಕ್ಷಣೆಗಾಗಿ ಆಯುಧಗಳನ್ನು ಇಟ್ಟುಕೊಳ್ಳಲು ಪರವಾನಿಗೆ

೧೧.) ಭಾರತೀಯ ಸೈನೀಕರು ವಿದೇಶಿ ಯುದ್ಧಗಳಲ್ಲಿ ಭಾಗವಹಿಸುವದನ್ನು ನಿಷೇಧ

**ಘಟನೆಗಳು**

೧೯೨೯ ಲಾಹೋರ ಕಾಂಗ್ರೇಸ ಆಧಿವೇಶನದಲ್ಲಿ ಅಧ್ಯಕ್ಷರಾದ ಜವಹರಲಾಲ ನೆಹರು ರವರು ಬ್ರಿಟಿಷ ಸರಕಾರಕ್ಕೆ ತಮ್ಮ ಬೇಡಿಕೆಗಳಿಗೆ ೧೫ ದಿನಗಳಲ್ಲಿ ಅಂದರೆ ೩೧/೧೨/೧೯೨೯ ಒಳಗೆ ಉತ್ತರಿಬೇಕು ಇಲ್ಲವೆ ಸತ್ಯಗ್ರಹವನ್ನು ಎದುರಿಸಬೇಕು.

೧.) ೨೦ ದಿನ ಕಳೆದರು ವೈಸರಾಯಯಿಂದ ಯಾವುದೇ ಉತ್ತರ ಬಾರದೆ ಇದ್ದಾಗ ನೆಹರುರವರು "ಸಂಪೂರ್ಣ ಸ್ವರಾಜ್ಯವೇ ಕಾಂಗ್ರೇಸಿನ ಗುರಿ " ಎಂದು ಘೋಷಿಸಿದರು ೧೯೩೦ ಜನವರಿ ೨೬ ರಂದು ಸ್ವತಂತ್ರದ ದಿನ ವೆಂದು ಘೋಷಿಸಿ, ತ್ರಿವರ್ಣಧ್ವಜವನ್ನು ಹಾರಿಸಿ ಸತ್ಯಗ್ರಹ ಪ್ರಾರಂಬಿಸಿದರು.

೨.) ೧೯೩೦ ಪೆಬ್ರುವರಿ ೧೪ರಂದು ವಲ್ಲಭಬಾಯಿ ಪಟೇಲರು ಬರ್ಡೋಲಿಯಲ್ಲಿ ಬ್ರಿಟಿಷ ಸರಕಾರವು ೨೨% ಭೂ ತೆರಿಗೆಯನ್ನು ಹೆಚ್ಚಿಸಿದ್ದನ್ನು ವಿರೋಧಿಸಲು ೮೦ ಸಾವಿರ ರೈತರೊಂದಿಗೆ ಕರಾನಿರಾಕರಣೆ ಸತ್ಯಗ್ರಹವನ್ನು ಪ್ರಾರಂಬಿಸಿದರು

೩) ಉಪ್ಪಿನ ಸತ್ಯಗ್ರಹ ಮಾರ್ಚ ೧೨ ೧೯೩೦ ಅಹ್ಮದಾಬಾದಿನ ಸಾಬರಮತಿ ಆಶ್ರಮದಿಂದ ಎಲ್ಲಾ ಧರ್ಮಕ್ಕೆ ಮತ್ತು ಎಲ್ಲಾ ಪ್ರಾಂತಕ್ಕೂ ಸೇರಿದ ೭೮ ಜನ ಅನೂಯಾಯಿ ಗಳೊಂದಿಗೆ, ಇದರಲ್ಲಿ ೧೮ವರ್ಷದ ಕರ್ನಾಟಕದ ಮೈಲಾರ ಮಹಾದೇವಪ್ಪ ಮತ್ತು ೬೧ವರ್ಷದ ಗಾಂಧಿಜಿ ನೇತೃತ್ವದಲ್ಲಿ ೨೪೦ಮೈಲು ದೂರದ ದಂಡಿ ಎಂಬ ಸಮುದ್ರತೀರವನ್ನು ದಿನಕ್ಕೆ ೧೫ ಮೈಲು ಕಾಲ್ನಡಿಗೆಯ ಮೂಲಕ ತಲುಪಿ ಉಪ್ಪನ್ನು ತಯಾರಿಸಿ ಮಾರಾಟ ಮಾಡುವ ಮೂಖಾಂತರ ಕಾನೂನು ಭಂಗ ಮಾಡುವ ಯೋಜನೆ ರೂಪಿಸಲಾಯಿತು. ಅದರಂತೆ ಎಪ್ರೀಲ್ ೫ರಂದು ತಾವೂಬ್ಬರೆ ಉಪ್ಪನ್ನು ತಯಾರಿಸಿ ಮಾರಾಟ ಮಾಡುವದರ ಮೂಲಕ ಕಾನೂನು ಭಂಗ ಮಾಡಿದರು ಮತ್ತು ಎಪ್ರೀಲ್ ೬ ರಿಂದ ಭಾರತದ್ಯಾಂತ ಚಳುವಳಿಯನ್ನು ಪ್ರಾರಂಬಿಸಲು ಕರೆ ನೀಡಿದರು.

೪.) ದೆಹಲಿಯಲ್ಲಿ ಮೋತಿಲಾಲರ ಪತ್ನಿ ಸ್ವರೂಪರಾಣಿ, ಮಗಳು ವಿಜಯಲಕ್ಷ್ಮಿರ್ಾಮ ಪಂಡಿತ ಸೂಸೆ ಕಮಲಾನೆಹರು ರವರು ೧೬೦೦ಜನ ಸ್ತ್ರೀಯರ ಜೋತೆ ಉಪ್ಪನ್ನು ಮಾರಾಟಮಾಡಿ ಬಂಧನಕ್ಕೆ ಒಳಗಾದರು. ಅದರಂತೆ ಅಲಹಬಾದನಲ್ಲಿ ಮೋತಿಲಾಲ ಮತ್ತು ಜವಹರಲಾಲರು, ಮುಂಬಯಿಯಲ್ಲಿ ಮದನಮೊಹನಮಾಳವಿ ಮತ್ತು ದೇವದಾಸ ಗಾಂಧಿ, ಕಲ್ಕತ್ತಾದಲ್ಲಿ ಸೇನಗುಪ್ತಾ, ಕೆ.ಎಮ್.ಮುನ್ಸಿ, ಸೂರತದಲ್ಲಿ ವಿಠಲ್ಬಾಯಿಪಟೇಲ್, ಕ್ಯಾಂಬೆಯಲ್ಲಿ ವಲ್ಲಭಬಾಯಿಪಟೇಲ, ದಾರವಾಡದಲ್ಲಿ ಮಹಾದೇವದೇಸಾಯಿ, ತಮಿಳುನಾಡಿನಲ್ಲಿ ರಾಜಗೋಪಾಲಚಾರ್ಯ, ಮುಂತಾದವ ಉಪ್ಪನ್ನು ತಯಾರಿಸಿ, ಮಾರಾಟ ಮಾಡುವದರ ಮುಖಾಂತರ ಕಾನೂನು ಮುರಿದು ಬಂಧನಕ್ಕೆ ಒಳಗಾದರು.

೫.) ದೇಶದ್ಯಾಂತ ಹೆಂಡದ0ಗಡಿ ಮುಂದೆ ಸಾವಿರಾರು ಶಾಲಾಮಕ್ಕಳು ಮತ್ತು ಸ್ತ್ರೀಯರು ಪಿಕೇಟಿಂಗ್ ನೆಡಸಿ, ಬಂಧನಕ್ಕೆ ಒಳಗಾದರು.

೬.) ಪೇಷಾವರದಲ್ಲಿ ಗಡಿನಾಡು ಗಾಂದಿ ಎಂತಲೆ ಪ್ರಸಿದ್ದರಾದ ಖಾನ ಅಬ್ದುಲ್ ಗಫಾರ್ ಖಾನ ರು ಖುದಾ ಕದ್ಬತ್‌ಗಾರ್ (ದೇವರ ಸೇವಕರು) ಕೆಂಪು ಸಮವಸ್ತ್ರಧಾರಿಗಳ ಸಂಘಟನೆ ಮಾಡಿ ಕಾನೂನು ಭಂಗ ಮಾಡಿ ೨೦ ಸಾವಿರ ಜನ ಸರೆಮನೆ ಸೇರಿದರು.

೭.) ಜನ ಬೀದಿಗಿಳಿದರು. ರಸ್ತೆಗಳನ್ನು ಬಂಧ ಮಾಡಿದರು, ರೈಲ್ವೆ ಸಂಪೂರ್ಣ ಸ್ಥಗಿತವಾಯಿತು. ತಂತಿಗಳನ್ನು ಕತ್ತರಿಸಲಾಯಿತು.ನೆಹರುರವರ ಡಿಸ್ಕವರಿ ಆಫ್ ಇಂಡಿಯಾ ಪ್ರಕಾರ ಹಾಗೂ ಸರಕಾರಿ ಅಧಿಕೃತ ವರದಿಯ ಪ್ರಕಾರ ದೇಶದಲ್ಲಿ ೨೫೦ ರೈಲ್ವೇ ನಿಲ್ದಾಣಗಳು, ೫೦೦ ಅಂಚೆಕಛೇರಿಗಳು, ೧೫೦ ಪೋಲಿಸಠಾಣೆಗಳನ್ನು, ೩೦೦ ಸೇತುವೆಗಳನ್ನು ಧ್ವಂಸಗೊ0ಡವು

೮.) ಅನೇಕ ಸರಕಾರಿ ಕಛೇರಿಗಳ ಮೇಲೆ ತ್ರಿವರ್ಣಧ್ವಜವನ್ನು ಹಾರಿಸಲಾಯಿತು

೯.) ಅನೇಕ ಗ್ರಾಮಗಳಲ್ಲಿ ಪರ್ಯಾಯ ಪಂಚಾಯತ್ ಸರಕಾರಗಳನ್ನು ರಚಿಸಲಾಯಿತು.

**ಚಳುವಳಿಯ ದಮನ**

೧.) ಚಳುವಳಿ ಪ್ರಾರಂಬವಾಗಿ ಏಂಟು ದಿನಗಳಲ್ಲಿಯೇ ರಾಷ್ಟ್ರೀಯ ಕಾಂಗ್ರೇಸನ ಎಲ್ಲಾ ಪ್ರಮುಖ ನಾಯಕರಾದ ಮಹಾತ್ಮ ಗಾಂಧೀ, ಜವಹರಲಾಲ ನೆಹರು, ವಲ್ಲಭ ಬಾಯಿ ಪಟೇಲ್, ಸಿ.ಆರ್.ದಾಸ್, ಎಮ್.ಆರ್.ಜಯಕರ್, ಇನ್ನೂ ಮುಂತಾದ ನಾಯಕರನ್ನು ಬಂಧಿಸಿ ಸರೆಮನೆಗೆ ಹಾಕಿದರು.

೨.) ನೆಹರು ರವರ ಡಿಸ್ಕವರಿ ಆಫ್ ಇಂಡಿಯಾ ಪ್ರಕಾರ ೨,೮೫,೦೦೦ ಜನರನ್ನು ಬಂಧಿಸಲಾಯಿತು. ೧೦,೦೦೦ ಜನ ಬ್ರಿಟಿಷರ ಗುಂಡಿಗೆ ಬಲಿಯಾದರು.

೩.) ಹರತಾಳ ಮತ್ತು ಬಹಿಷ್ಕರ, ಪಿಕೆಟಿಂಗ್ ಗಳನ್ನು ಪೋಲಿಸ ಮತ್ತು ಸೈನ್ಯದಿಂದ ಹತ್ತಿಕ್ಕಲಾಯಿತು.

**ಚಳುವಳಿಯ ವಿಫಲಕ್ಕೆ ಕಾರಣಗಳು**

೧.) ರಾಷ್ಟ್ರೀಯ ಕಾಂಗ್ರೇಸನ ಪ್ರಮುಖ ನಾಯಕರೆಲ್ಲರನ್ನು ಬಂಧಿಸಲಾಯಿತು.

೨.) ರಾಷ್ಟ್ರೀಯ ಕಾಂಗ್ರೇಸನ ಎರಡನೇಯ ದರ್ಜೆಯ ನಾಯಕರ ಕೊರತೆ.

೩.) ಪೂರ್ವಯೋಜನೆ, ಪೂರ್ವ ತಯಾರಿಲ್ಲದಯೇ ಚಳುವಳಿಯನ್ನು ಪ್ರಾರಂಭಿಸಿದ್ದು

೪.) ಮುಸ್ಲೀಂ ಲೀಗ್ ಚಳುವಳಿಯನ್ನು ಸಂಪೂರ್ಣವಾಗಿ ವಿರೋಧಿಸಿ, ಬ್ರಿಟಿಷ ಸರಕಾರಕ್ಕೆ ಸಹಕರಿಸಿದ್ದು

೫.) ಮುಸ್ಲೀಂ ಲೀಗ್ "ನೇರ ಕಾರ್ಯಚರಣೆ " ಘೋಷಿಸಿದ್ದರಿಂದ ದೇಶದ್ಯಾಂತ ಕೋಮು ಗಲಭೆ ಪ್ರಾರಂಭವಾದ್ದರಿ0ದ

**ಪರಿಣಾಮಗಳು**

೧.) ದೇಶದತುಂಬೆಲ್ಲಾ ೪೦ ರಿಂದ ೫೦ಸಾವಿರ ಜನ ಬಂದನಕ್ಕೆ ಒಳಗಾದರು.

೨.) ಶಾಲಾ-ಕಾಲೇಜುಗಳು ಮತ್ತು ಸರಕಾರದ ದೊಡ್ಡ ಕಟ್ಟಡಗಳಲ್ಲೆವು ತಾತ್ಕಲಿಕ ಜೈಲ್ ಆಗಿ ಪರಿವರ್ತನೆಯಾದವು.

೩.)ಬ್ರಿಟಿಷ ಸರಕಾರವು ಸತ್ಯಗ್ರಹಿಗಳ ಹೋರಾಟ ಎದುರಿಸುವಲ್ಲಿ ವಿಫಲವಾಯಿತು

೪.) ಗಾಂದಿಜಿಯೋಡನೆ ಮಾತುಕತೆ ಮಾಡಲು ಸಿದ್ದರಾದರು.

೫.) ವೈಸರಾಯ ಐರ್ವಿನ್ ಮತ್ತು ಗಾಂದಿಜಿಯವರ ಮಧ್ಯ ಒಪ್ಪಂದವಾಯಿತು.

**ಚಳುವಳಿಯ ನಿಲುಗಡೆ**

ಗಾಂಧೀ – ಇರ್ವಿನ್ ಒಪ್ಪಂದ ೫/೩/೧೯೩೧ ದೆಹಲಿ

೧.) ಚಳುವಳಿಯ ರದ್ದತಿ

೨.) ರಾಜಕೀಯ ಬಂಧಿಗಳ ಬಿಡುಗಡೆ

೩.) ಭಾರತೀಯರಿಗೆ ಉಪ್ಪು ತಯಾರಿಸುವ ಹಕ್ಕು ನೀಡಲಾಯಿತು.

೪.) ಗಾಂಧಿಜಿಯವ ಎರಡನೇಯ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಬೇಕು

**ಉಪಸಂಹಾರ**

ಈ ಒಪ್ಪಂದವು ಭಾರತದ ಸ್ವಾತಂತ್ರ್ಯ ಮತ್ತು ರಾಜಕೀಯ ಚಟುವಟಿಕೆಗಳಿಗೆ ಯಾವ ಲಾಭ ತರಲಿಲ್ಲ. ಕ್ರಾಂತಿಕಾರಿ ನಾಯಕರಾದ ಭಗತಸಿಂಗ್, ರಾಜಗುರು, ಮತ್ತು ಸುಖದೇವರ ಗಲ್ಲುಶಿಕ್ಷೆಯನ್ನು ತಡೆಯಲಾಗಲಿಲ್ಲ